ವಡ್ಡರಹಳ್ಳಿ-ಲಕ್ಷ್ಮಿಪುರ, ಬದ್ರೀಕೊಪ್ಪಲು, ದರವಯ್ಯನಕೊಪ್ಪಲು) 15 ಗ್ರಾಮಗಳಲ್ಲಿ ಕುಡಿಯುವ ನೀರಿನ ಯೋಜನೆ ಮಂಜೂರಾಗಿದ್ದು ಸೂಕ್ತ ಜಲಮೂಲ ಲಭ್ಯವಾಗಿಲ್ಲದಿರುವುದರಿಂದ. ಯೋಜನೆ ಕಾರ್ಯಗತ ವಾಗಿರುವುದಿಲ್ಲ ಆದುದರಿಂದ ಪರ್ಯಾಯ ಜಲಮೂಲಗಳ ಅನ್ವೇಷಣೆಯನ್ನು ಆದ್ಯತೆ ಮೇಲೆ ಮಾಡಲಾಗುತ್ತಿದೆ.

ರಾಜ್ಯದಲ್ಲಿರುವ ಪ್ರಾಥಮಿಕ ಶಾಲೆಗಳ ಹಾಗೂ ಶಿಕ್ಷಕರ ಸಂಖ್ಯೆ

1457(1571) ಶ್ರೀ ಎಂ. ಚಂದ್ರಪ್ಪ (ಭರಮಸಾಗರ): ಮಾನ್ಯ ಪ್ರಾಥಮಿಕ ಹಾಗೂ ಪೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕರ್ನಾಟಕ ರಾಜ್ಯದಲ್ಲಿರುವ ಪ್ರಾಥಮಿಕ ಶಾಲೆಗಳ ಹಾಗೂ ಶಿಕ್ಷಕರ ಸಂಖ್ಯೆ ಎಷ್ಟು; ಹಾಗೂ ಜನವರಿ 2003ರ ಅಂತ್ಯಕ್ಕೆ ಖಾಲಿ ಇರುವ ಶಿಕ್ಷಕರ ಸಂಖ್ಯೆ ಎಷ್ಟು; (ಅನುದಾನಿತ ಖಾಸಗಿ ಸರ್ಕಾರಿ ಶಾಲೆಗಳ ವಿವರ ಪ್ರತ್ಯೇಕವಾಗಿ ನೀಡುವುದು);

ಆ. ಮಾನ್ಯ ರಾಜ್ಯಸಭಾ ಸದಸ್ಯರಾಗಿರುವ ಡಾ. ರಾಜಾರಾಮಣ್ಣ ಸಮಿತಿಯ ವರದಿಯನ್ನು 2001-02ನೇ ಸಾಲಿನಲ್ಲಿ ಜಾರಿಗೆ ತರುವುದರ ಬಗ್ಗೆ ಘೋಷಣೆ ಮಾಡಿದ್ದು ಅದು ಕಾರ್ಯರೂಪಕ್ಕೆ ಬಾರದೇ 2003-04ನೇ ಸಾಲಿಗೆ ಜಾರಿಗೆ ತರುವುದರ ಬಗ್ಗೆ ಕ್ರಮ ತೆಗೆದು ಕೊಳ್ಳಲಾಗುವುದೆ;

ಇ. ಮಾನ್ಯ ಶ್ರೀ. ರಾಜಾರಾಮಣ್ಣ ಸಮಿತಿಯ ವರದಿಯಲ್ಲಿ ಪ್ರಾಥಮಿಕ ಶಾಲೆಗೆ 5ನೇ ತರಗತಿಯನ್ನು ಮಾಧ್ಯಮಿಕ ಶಾಲೆಗೆ 8ನೇ ತರಗತಿಯನ್ನು ಮತ್ತು ಪ್ರಾಥಮಿಕ ಶಾಲೆಗೆ ಟಿ.ಸಿ.ಹೆಚ್ ತರಬೇತಿ ಹಾಗೂ ಮಾಧ್ಯಮಿಕ ಶಾಲೆಗೆ ಬಿ.ಎಡ್ ಆಗಿರುವ ಶಿಕ್ಷಕರನ್ನು ನೇಮಿಸುವ ಬಗ್ಗೆ ಶಿಫಾರಸ್ಸು ಮಾಡಲಾಗಿದೆಯೆ;

ಈ. ಈ ವರದಿಯನ್ನು ಜಾರಿಗೆ ತರದಿದ್ದಲ್ಲಿ ಸರ್ಕಾರ ಈ ಸಮಿತಿಯನ್ನು ರಚಿಸಿದ್ದು ವ್ಯರ್ಥವಲ್ಲವೇ?

ಪ್ರೋ. ಬಿ. ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ. ರಾಜ್ಯದಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ: 48,716, ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿರುವ ಶಿಕ್ಷಕರ ಸಂಖ್ಯೆ: 2,09,837..

ಖಾಸಗಿ ಅನುದಾನಿತ ಪ್ರಾಥಮಿಕ ಶಾಲೆಗಳ ಸಂಖ್ಯೆ: 2428. ಖಾಸಗಿ ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿರುವ ಶಿಕ್ಷಕರ ಸಂಖ್ಯೆ: 17,498.

ಜನವರಿ 2003ರ ಅಂತ್ಯಕ್ಕೆ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿರುವ ಖಾಲಿ ಇರುವ ಶಿಕ್ಷಕರ ಹುದ್ದೆಗಳು: 7811. ಹಾಗೂ ಖಾಸಗಿ ಅನುದಾನಿತ ಶಾಲೆಗಳಲ್ಲಿ: 585.

ಆ. ಡಾ. ರಾಜಾರಾಮಣ್ಣ ಸಮಿತಿಯ ವರದಿಯಲ್ಲಿ ಮಾಡಿರುವ 24 ಶಿಫಾರಸ್ಸುಗಳಲ್ಲಿ ಈವರೆಗೆ 17 ಶಿಫಾರಸ್ಸುಗಳನ್ನು ಜಾರಿಗೊಳಿಸಲಾಗಿದೆ. ಉಳಿದ 7 ಶಿಫಾರಸ್ಸುಗಳನ್ನು ಹಂತ ಹಂತವಾಗಿ ಜಾರಿಗೊಳಿಸಲಾಗುತ್ತಿದೆ.

ಇ. ಹೌದು.

ಪಿಯುಸಿ ಯೊಂದಿಗೆ ಟಿ.ಸಿ.ಹೆಚ್ ತರಬೇತಿ ಹೊಂದಿದಂತಹವರನ್ನು ಪ್ರಾಥಮಿಕ ಶಿಕ್ಷಕರನ್ನಾಗಿ ನೇಮಿಸಲು ಶಿಫಾರಸ್ಸು ಮಾಡಲಾಗಿದೆ. ಆದರೆ ಮಾಧ್ಯಮಿಕ ಶಾಲೆಗೆ ಬಿ.ಎಡ್ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ವರದಿಯಲ್ಲಿ ಶಿಫಾರಸ್ಸು ಮಾಡಿರುವುದಿಲ್ಲ.

ಈ. ಈ ವರದಿಯ ಶಿಫಾರಸ್ಸುಗಳನ್ನು ಜಾರಿಗೆ ತರುವಾಗ 17 ಶಿಫಾರಸ್ಸುಗಳನ್ನು ಜಾರಿಮಾಡಲಾಗಿದೆ. ಉಳಿದ 7 ಶಿಫಾರಸ್ಸುಗಳನ್ನು ಹಂತ ಹಂತವಾಗಿ ಜಾರಿಗೊಳಿಸಲಾಗುತ್ತಿದೆ. ಇಲಾಖೆಯಲ್ಲಿ ಆಮೂಲಾಗ್ರ ಬದಲಾವಣೆ ಮಾಡಲಾಗುತ್ತದೆ. ಆದ್ದರಿಂದ ಈ ಸಮಿತಿಯನ್ನು ರಚಿಸಿದ್ದು ವ್ಯರ್ಥವಾಗಿಲ್ಲ.

ಶಿವಮೊಗ್ಗ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ರಾಜರಾಮ್ ಮೋಹನ್‌ರಾಯ್ ಗ್ರಂಥಾಲಯ ನಿರ್ಮಾಣ

1458(1534) ಶ್ರೀ ಚಂದ್ರಶೇಖರಪ್ಪ ಹೆಚ್. ಎಂ. (ಶಿವಮೊಗ್ಗ): ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ರಾಜಾರಾಂ ಮೋಹನ್‌ರಾಯ್ ಗ್ರಂಥಾಲಯ ಯೋಜನೆಯಡಿಯಲ್ಲಿ ಎಷ್ಟು ಗ್ರಂಥಾಲಯ ಕಟ್ಟಡಗಳನ್ನು ಕಟ್ಟುವ ಯೋಜನೆ ಹಮ್ಮಿಕೊಳ್ಳಲಾಗಿದೆ. ಇದು ಯಾವ ಹಂತದಲ್ಲಿದೆ;

ಆ. ಇದಕ್ಕಾಗಿ ಈವರೆಗೆ ಬಿಡುಗಡೆಯಾದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಅನುದಾನವೆಷ್ಟು;

ಇ. ಗ್ರಂಥಾಲಯಗಳು ಯಾವಾಗ ಸಾರ್ವಜನಿಕ ಉಪಯೋಗಕ್ಕೆ ದೊರಕಲಿವೆ (ವಿವರ ನೀಡುವುದು)?

ಶ್ರೀ ಬಾಬುರಾವ್ ಚವ್ಹಾಣ (ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು)

ಅ. ಶಿವಮೊಗ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 4 ಗ್ರಂಥಾಲಯ ಕಟ್ಟಡ ಕಟ್ಟುವ ಯೋಜನೆ ಹಮ್ಮಿಕೊಳ್ಳಲಾಗಿದೆ. ಇವುಗಳಲ್ಲಿ 3 ಕಟ್ಟಡಗಳ ನಿರ್ಮಾಣವು ಪೂರ್ಣಗೊಳ್ಳುವ ವಿವಿಧ ಹಂತದಲ್ಲಿದ್ದು, ಒಂದು ಕಟ್ಟಡದ ನಿರ್ಮಾಣ ಕಾಮಗಾರಿ ಸದ್ಯದಲ್ಲೇ ಪ್ರಾರಂಭವಾಗುವ ಹಂತದಲ್ಲಿದೆ.

ಆ. ಈ ಗ್ರಂಥಾಲಯಗಳ ಕಟ್ಟಡ ಕಟ್ಟಲು ರಾಜಾರಾಂ ಮೋಹನ್‌ರಾಯ್ ಗ್ರಂಥಾಲಯ ಪ್ರತಿಷ್ಠಾನ, ಕೋಲ್ಕತ್ತ ಇವರ ವತಿಯಿಂದ ರೂ. 7.30 ಲಕ್ಷ ಹಾಗೂ ನಗರ ಮತ್ತು ಜಿಲ್ಲಾ ಗ್ರಂಥಾಲಯ ಪ್ರಾಧಿಕಾರದ ನಿಧಿಯಿಂದ ರೂ. 1.75 ಲಕ್ಷಗಳ ಅನುದಾನವು ಬಿಡುಗಡೆಯಾಗಿದೆ. ರಾಜ್ಯ ಸರ್ಕಾರದ ಅನುದಾನದ ಪಾಲು ಇರುವುದಿಲ್ಲ.

ಇ. ಈ ನಾಲ್ಕು ಗ್ರಂಥಾಲಯಗಳಾದ ಹಸೂಡಿ, ಉಂಬ್ಲೆಬೈಲು, ರವೀಂದ್ರನಗರ ಹಾಗೂ ವಿದ್ಯಾನಗರ ಗ್ರಂಥಾಲಯಗಳ ಕಟ್ಟಡಗಳು ಒಂದು ವರ್ಷದ ಅವಧಿಯಲ್ಲಿ ಸಾರ್ವಜನಿಕರ ಉಪಯೋಗಕ್ಕೆ ದೊರೆಯುವ ನಿರೀಕ್ಷೆಯಿದೆ.

ಶಿವಮೊಗ್ಗ ವಿಧಾನಸಭಾಕ್ಷೇತ್ರದ ಸ್ವಜಲಧಾರ ಯೋಜನೆ

1459(1535) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ): ಮಾನ್ಯ ಗ್ರಾಮೀಣ ನೀರು ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?